ಶ್ರೀ ರಾಮಕೃಷ್ಣ ಹೆಗಡೆ.— ಸೊಳ್ಳೆ ಕಾಟ ಹೋಗುವುದು ಯಾವಾಗ ಎಂದರೆ, ನಮ್ಮಲ್ಲಿ ಅನೇಕ ಕಡೆ ಕೊಳಚೆ ನೀರು ಓಪನ್‌ಗಟಾರದ ಒಳಗೆ ಹೋಗುತ್ತಿದೆ. ಇದು ಎಲ್ಲಿಯವರೆಗೆ ನಿಲ್ಲುವುದಿಲ್ಲವೊ ಅಲ್ಲಿಯವರೆಗೆ ಸೊಳ್ಳೆ ಕಾಟ ಹೋಗುವುದಿಲ್ಲ.

ಪ್ರಶ್ನೆ ಸಂಖ್ಯೆ ೩೭ (೧೦೯)

ಶ್ರೀ ಪ್ರಭಾಕರ್ ಎಸ್. ರಾಣೆ.— ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು.

ಪೋಲೀಸ್ ಇಲಾಖೆಯಲ್ಲಿರುವ ಮಹಿಳಾ ಪೋಲೀಸರು

೩೭. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಎಷ್ಟು ಮಂದಿ ಮಹಿಳಾ ಪೋಲೀಸ್‌ನವರಿದ್ದಾರೆ ;

ಆ) ಇವರಲ್ಲಿ ಎಸ್.ಪಿ.ಡಿ.ವೈ.ಎಸ್.ಪಿ. ಇನ್‌ಸ್ಪೆಕ್ಟರ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯಲ್ಲಿರುವವರ ಸಂಖ್ಯೆ ಎಷ್ಟು;

ಇ) ಮಹಿಳಾ ಪೋಲೀಸರಿಗೆ ತರಬೇತಿ ನೀಡಲು ಪ್ರತ್ಯೇಕವಾದ ತರಬೇತಿ ಕೇಂದ್ರ ತೆರೆಯಲಾಗಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಗೃಹಮಂತ್ರಿಗಳು).—

ಅ) ಮಹಿಳಾ ಪೋಲೀಸ್‌ನವರ ಸಂಖ್ಯೆ: ೩೨೪.

ಆ) ಎಸ್.ಪಿ. (ಐಪಿಎಸ್) ೩

ಡಿ.ವೈ.ಎಸ್.ಪಿ. —

ಇನ್ಸ್‌ಪೆಕ್ಟರ್ —

ಸಬ್‌ಇನ್ಸ್‌ಪೆಕ್ಟರ್ ೨೬

ಇ) ಐಪಿಎಸ್ ಮಹಿಳೆಯರಿಗೆ ಪ್ರತ್ಯೇಕವಾದ ಪೋಲೀಸ್ ತರಬೇತಿ ಕೇಂದ್ರವಿರುವುದಿಲ್ಲ. ಇವರುಗಳು ಪೋಲೀಸ್ ಪೋಲೀಸ್ ತರಬೇತಿ ಅಕಾಡಮಿ, ಹೈದರಾಬಾದ್ ಹಾಗು ಪೋಲೀಸ್ ತರಬೇತಿ ಕಾಲೇಜು ಮೈಸೂರು ಇಲ್ಲಿ ಪುರುಷ ಕೆಡೆಟ್‌ಗಳ ಜೊತೆಯಲ್ಲಿ ತರಬೇತಿಯನ್ನು ಪಡೆಯುತ್ತಾರೆ.

ಪತ್ರಾಂಕಿತರಲ್ಲದ ಮಹಿಳೆಯರಿಗೆ ಮೈಸೂರಿನ ಪೋಲೀಸ್ ತರಬೇತಿ ಕಾಲೇಜಿನಲ್ಲಿ ಪ್ರತ್ಯೇಕವಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಶ್ರೀ ವೇದಾಂತ ಹೆಮ್ಮಿಗೆ — ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ೧೭೫ ತಾಲ್ಲೂಕುಗಳು ಇವೆ. ಇವರ ಪೋಲೀಸ್ ಇಲಾಖೆಯಲ್ಲಿ ೩೨೪ ಜನ ಮಹಿಳಾ ಪೋಲೀಸ್ ಪೇದೆಗಳು ಇದ್ದಾರೆ, ಇದನ್ನು ನೋಡಿದರೆ ಒಂದು ತಾಲ್ಲೂಕಿಗೆ ಎರಡು ಜನರೂ ಇಲ್ಲ. ೨೬ ಜನ ಮಹಿಳಾ ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. ಇಡೀ ಪೋಲೀಸ್ ಇಲಾಖೆಯ ಬಲವನ್ನು ತೆಗೆದುಕೊಂಡರೆ ಇದು ನೆಗ್ಲಿಜಬಲ್. ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ ಇಷ್ಟು ಕಡಿಮೆ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಪೋಲೀಸ್ ಇಲಾಖೆಗೆ ಬರುತ್ತಿರಬೇಕಾದರೆ, ಅವರು ಪೋಲೀಸ್ ಇಲಾಖೆಯಲ್ಲಿ ಕೆಲಸಕ್ಕೆ ಕರೆದಾಗ ಅರ್ಜಿ ಹಾಕುತ್ತಿದ್ದಾರೆಯೇ? ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಕರೆದಾಗ ಪೇದೆ ಕೆಲಸಕ್ಕೆ ಕರೆದಾಗ ಹೆಣ್ಣುಮಕ್ಕಳು ತಾವಾಗಿಯೇ ಮುಂದೆ ಬಂದು ಅರ್ಜಿ ಹಾಕುತ್ತಿದ್ದಾರೆಯೇ? ಇಲ್ಲವೇ ಅರ್ಜಿ ಹಾಕಿದರೂ ಅವರನ್ನು ನೀವು ಸೆಲೆಕ್ಟ್ ಮಾಡುತ್ತಿದ್ದೀರಾ ಅಥವಾ ಇಲ್ಲವೇ? ನಮ್ಮಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳು ಪ್ರಾಮಾಣಿಕರು ಎಂದು ಹೆಸರು ತೆಗೆದುಕೊಂಡಿದ್ದಾರೆ. ಅವರು ಪ್ರಾಮಾಣಿಕರು ಎಂದು ನಾವು ಒಪ್ಪಿಕೊಂಡಿದ್ದೇವೆ. ಸಾಮಾನ್ಯವಾಗಿ ನಮ್ಮಲ್ಲಿ ಪ್ರಾಮಾಣಿಕತೆಗೆ ಹೆಂಗಸರು ಹೆಸರಂ ಪಡೆದಿದ್ದಾರೆ. ಹೆಣ್ಣು ಮಕ್ಕಳು ಜಾಸ್ತಿ ಸಂಖ್ಯೆಯಲ್ಲಿ ಪೋಲೀಸ್ ಇಲಾಖೆಯಲ್ಲಿದ್ದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರಂ.-- ಪ್ರಶ್ನೆ ಸರಿಯಾಗಿ ಕೇಳಿ.

ಶ್ರೀ ವೇದಾಂತ ಹೆಮ್ಮಿಗೆ.-- ಹೆಣ್ಣು ಮಕ್ಕಳ ಅನುಕೂಲಕ್ಕಾಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು -- ತಾವು ಪ್ರಶ್ನೆ ಕೇಳಿ.

ಶ್ರೀ ವೇದಾಂತ ಹೆಮ್ಮಿಗೆ -- ಹೆಣ್ಣು ಮಕ್ಕಳು ಪೋಲೀಸ್ ಇಲಾಖೆಯಲ್ಲಿ ಸೇರುವುದಕ್ಕೆ ಪ್ರೋತ್ಸಾಹದಾಯಕವಾಗಿ ಅವರಿಗೆ ಇನ್‌ಸೆಂಟೀವ್ ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ?

ಶ್ರೀ ಆರ್. ಎಲ್. ಜಾಲಪ್ಪ.-- ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.-- ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ?

ಅಧ್ಯಕ್ಷರು.-- ಮಾನ್ಯ ಖಾರ್ಗೆಯವರೇ ಸುಮ್ಮನೆ ಕೇಳಿ.

ಶ್ರೀ ಆರ್. ಎಲ್. ಜಾಲಪ್ಪ -- ಈ ವರ್ಷ ಒಂದು ನೂರು ಜನ ಹೆಣ್ಣು ಮಕ್ಕಳನ್ನಾದರೂ ಮಹಿಳಾ ಕಾನ್ಸ್‌ಟೇಬಲ್‌ಗಳಾಗಿ ತೆಗೆದುಕೊಳ್ಳಬೇಕೆಂದು ಇದ್ದೇವೆ. ನಗರ ಪ್ರದೇಶಗಳಲ್ಲಿ ಮಹಿಳಾ ಕಾನ್ಸ್‌ಟೇಬಲ್‌ಗಳ ಅವಶ್ಯಕತೆ ಇದೆ. ಇನ್ನು ಎರಡು ಅಥವಾ ಮೂರು ತಿಂಗಳೊಳಗೆ ಇದರ ಬಗ್ಗೆ ಅಡ್ವರ್ಟೈಸ್‌ಮೆಂಟ್ ಹೊರಡಿಸಿ ನೌಕರಿಗೆ ತೆಗೆದುಕೊಳ್ಳುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.-- ೨೬ ಜನ ಮಹಿಳಾ ಸಬ್ ಇನ್ಸ್‌ಪೆಕ್ಟರ್ಸ್ ಮತ್ತು ೩೨೪ ಜನ ಮಹಿಳಾ ಕಾನ್ಸ್‌ಟೇಬಲ್‌ಗಳ ಪೈಕಿ ಯಾರಾದರೂ ಭ್ರಷ್ಟಾಚಾರದಲ್ಲಿ ಸಿಕ್ಕಿ ಕೆಲಸದಿಂದ ವಜಾ ಆಗಿದ್ದಾರೆಯೇ?

ಶ್ರೀ ಆರ್. ಎಲ್. ಜಾಲಪ್ಪ.-- ನನ್ನ ಹತ್ತಿರ ಅಂಕಿ ಅಂಶಗಳು ಇಲ್ಲ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.-- ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ವೈಟ್, ಹೈಟ್ ಫಿಸಿಕಲ್ ಫಿಟ್‌ನೆಸ್ ನೋಡಬೇಕೆಂದು ಕಾನೂನು ಇದೆ. ಪೋಲೀಸ್ ಇಲಾಖೆಯ ಮಂತ್ರಿಯವರಿಗೆ ಇದು ಅನ್ವಯಿಸುವುದಿಲ್ಲವೇ?

ಶ್ರೀ ಆರ್. ಎಲ್. ಜಾಲಪ್ಪ.-- ಅದನ್ನು ನಾನು ಒಪ್ಪುತ್ತೇನೆ. ನಮ್ಮ ಮನೆಯ ಹೆಂಗಸರು ಸಹ ನೀವು ಇರೋದು ಐದು ಅಡಿ ಎರಡು ಅಂಗುಲ ನಿಮಗೆ ಏಕೆ ಪೋಲೀಸ್ ಇಲಾಖೆ ಎಂದು ಕೇಳಿದರು.

ಶಹಬಾದ್‌ನಲ್ಲಿ ಸರ್ಕಾರಿ ಆಸ್ಪತ್ರೆಯನ್ನು ನಿರ್ಮಿಸುವುದು

೨೬೦. **ಶ್ರೀ ಕೆ. ಬಿ. ಶಾಣಪ್ಪ** (ಶಹಾಬಾದ್).-- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಶಹಾಬಾದ್ ಸರ್ಕಾರಿ ಆಸ್ಪತ್ರೆಯನ್ನು ನಿರ್ಮಿಸಲು ಒಟ್ಟು ಎಷ್ಟು ಹಣ ತಗಲುವುದೆಂದು ಅಂದಾಜು ಮಾಡಲಾಗಿದೆ ?

೨) ಈಗ ಎಷ್ಟು ಹಣವನ್ನು ಇದಕ್ಕೆ ಖರ್ಚು ಮಾಡಲಾಗಿದೆ ?

೩) ಸದರಿ ಕಟ್ಟಡದ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

೪) ೧೯೮೭-೮೮ನೇ ಸಾಲಿನಲ್ಲಿ ಕಟ್ಟಡಕ್ಕಾಗಿ ಕಾಯ್ದಿರಿಸಿದ ಹಣವೆಷ್ಟು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).--

೧) ೮.೮೦ ಲಕ್ಷ ರೂ.ಗಳು.

೨) ೪.೩೦ ಲಕ್ಷ ರೂ.ಗಳು.

೩ ಅದಷ್ಟು ಬೇಗ

೪) ೧೯೮೭-೮೮ನೇ ಸಾಲಿನಲ್ಲಿ ಇದಕ್ಕೆ ೧೫೦೦ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.